ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

5

ಇಲಾಖೆ / ವಿಷಯ : DEPARTMENT / SUBJECT: ಗೃಹ - CD ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ ದಿನಾಂಕ : DATE: 27/3/21

### ಯುವತಿ ದೂರು ಆಧರಿಸಿ ಅತ್ಯಾಚಾರ ಪ್ರಕರಣ ದಾಖಲು

# ರಮೇಶ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ 27-3-21

ಬೆಂಗಳೂರು: ಸಿ.ಡಿ ಪ್ರಕರಣ ಮಹಾ ತಿರುವು ಪಡೆದುಕೊಂಡಿದ್ದು, 'ಕೆಲಸದ ಆಮಿಷವೊಡ್ಡಿ ಯುವತಿ ಮೇಲೆ ಅತ್ಯಾಚಾರ ಎಸಗಿದ' ಆರೋಪದಡಿ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಅದರ ಬೆನ್ನಲ್ಲೇ, ಸಂತ್ರಸ್ತ ಯುವತಿ ತನ್ನ ತಮ್ಮ ಹಾಗೂ ಅಮ್ಮನ ಜತೆ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಬಹಿರಂಗಗೊಂಡಿದೆ. ಅದರಲ್ಲಿ 'ತಾನು ಡಿ.ಕೆ. ಶಿವಕುಮಾರ್ ಮನೆ ಬಳಿ ಬಂದಿದ್ದೀನಿ' ಎಂದು ಯುವತಿ ಹೇಳಿದ್ದಾರೆ.

ಆಡಿಯೊ ಹೊರಬರುತ್ತಿದ್ದಂತೆ ಸುದ್ದಿಗಾರರ ಎದುರು ಕಾಣಿಸಿಕೊಂಡ ರಮೇಶ ಜಾರಕಿಹೊಳಿ, 'ಇದು ಟ್ರಯಲ್ ಅಷ್ಟೆ. ನಾಳೆ ದೊಡ್ಡ ಸುದ್ದಿ ಕೊಡ್ತೀನಿ' ಎಂದು ಹೇಳಿದ್ದಾರೆ. 'ಇದರಲ್ಲಿ ಡಿ.ಕೆ. ಶಿವಕುಮಾರ್ ಪಾತ್ರ ಇದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ, 'ಶಿವಕುಮಾರ್ ನನ್ನ ಹಳೆಯ ಗೆಳೆಯ. ನನ್ನ ಕಷ್ಟಕ್ಕೆ ಆಗಿದ್ದಾನೆ. ಅವನು ನನ್ನಂತೆ ರಾಜೀನಾಮೆ ಕೊಡುವುದು ಬೇಡ, ಕೆಪಿಸಿಸಿ ಅಧ್ಯಕ್ಷರಾಗಿ ಹೋರಾಟ ಮಾಡುತ್ತಲೇ ಇರಲಿ' ಎಂದು ರಮೇಶ ಪ್ರತಿಕ್ರಿಯಿಸಿದ್ದಾರೆ.

ಆದರೆ, ಆಡಿಯೊ ಹೊರಬಂದ ಬಳಿಕ ಪ್ರತಿಕ್ರಿಯೆ ಪಡೆಯಲು ಡಿ.ಕೆ. ಶಿವಕುಮಾರ್ ಲಭ್ಯರಾಗಲಿಲ್ಲ.

ಸಿ.ಡಿ. ಬಯಲಿಗೆ ಬಂದಾಗಿನಿಂದ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದ್ದ ಪ್ರಕರಣ ಶುಕ್ರವಾರ ಸಂಜೆಯ ಹೊತ್ತಿಗೆ ಕ್ಷಣ ಕ್ಷಣದ ಬದಲಾವಣೆಗೆ ದಾರಿ ಮಾಡಿಕೊಟ್ಟಿತು.

ಏತನ್ಮಧ್ಯೆ, ಗುಪ್ತಚರ ವಿಭಾಗದ ಮುಖ್ಯಸ್ಥರನ್ನು ತಮ್ಮ ಮನೆಗೆ ಕರೆಯಿಸಿಕೊಂಡ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಈ ಎಲ್ಲ ಘಟನಾವಳಿಗಳ ಬಗ್ಗೆ ಮಾಹಿತಿ ಪಡೆದರು. ಶಿವಕುಮಾರ್ ಹೆಸರು ಮುನ್ನೆಲೆಗೆ ಬಂದಿರುವುದರಿಂದಾಗಿ ಸಿ.ಡಿ ಪ್ರಕರಣವೀಗ ರಾಜಕೀಯ ಜಿದ್ದಾಜಿದ್ದಿಗೆ ದಾರಿ ಮಾಡಿಕೊಡುವ ಸಾಧ್ಯತೆಯೂ ಇದೆ.

## ಆಡಿಯೊದಲ್ಲಿದೆ ಡಿ.ಕೆ. ಶಿವಕುಮಾರ್ ಹೆಸರು

ಬೆಂಗಳೂರು: ಸಂತ್ರಸ್ತ ಯುವತಿ ತನ್ನ ಕುಟುಂಬದವರ ಜತೆ ಮಾತನಾಡಿದ್ದು ಎನ್ನಲಾದ 6.59 ನಿಮಿಷದ ಆಡಿಯೊ ತುಣುಕು ಶುಕ್ರವಾರ ಬಹಿರಂಗಗೊಂಡಿದೆ.

ಈ ಆಡಿಯೊದಲ್ಲಿ ಡಿ.ಕೆ.ಶಿವಕುಮಾರ್ ಅವರ ಹೆಸರು ಪ್ರಸ್ತಾಪವಾಗಿದೆ. ಅದರ ಪೂರ್ಣ ಪಾಠ ಇಲ್ಲಿದೆ.

**ಯುವತಿಯ ತಮ್ಮ:** ಏನ್ ಮಾಡಕ್ಕ ಹತ್ತಿದ್ದಿ?

**ಯುವತಿ:** ಇಲ್ಲೇ ನಾನು, ಆಕಾಶ್ ಇದ್ದೀವಿ.

**ತಮ್ಮ:** ಊಟ...?

**ಯುವತಿ:** ಊಟ ಆಯ್ತುಲೇಪ್ಪಾ. ಚಿನ್ನಿ ನಿನ್ನ ಮೇಲೆ ಆಣೆ, ನಮ್ಮ ಮಮ್ಮಿ ಮೇಲೆ ಆಣೆ, ನಾನು ನಂಬುವ ಕೃಷ್ಣನ ಮೇಲೆ ಆಣೆ, ಅದು ನಾನಲ್ಲ. ನೀ ಆದರೂ ನನ್ನ ನಂಬಲೇ ಪಾ, ಯಾರೂ ನನ್ನ ನಂಬ್ತಿಲ್ಲ.

**ತಮ್ಮ:** ನಂಬಿದೀನಿಲೇಪ್ಪಾ

**ಯುವತಿ:** ಊಟ ಆಯ್ತು. ನ್ಯೂಸ್‌ನಾಗ ಅದೆಲ್ಲ ಏನ್ ತೋರ್ಸಾ ಹತ್ತೆರಾ ಅದೆಲ್ಲ ಗ್ರಾಫಿಕ್ಸ್ ಅದಾ ಚಿನ್ನಿ.

**ತಮ್ಮ:** ಗ್ರಾಫಿಕ್ಸಾ?

**ಯುವತಿ:** ಲೇಪಾ ನಾ ಯಾಕ್ ಅಂತಾ ಕೆಲ್ಸಕ್ ಹೋಕ್ಕೀನಿ ಹೇಳು? ಒಂದ್ ಸ್ವಲ್ಪ ನೀನೇ ಯೋಚ್ನೆ ಮಾಡು.

**ತಮ್ಮ:** ನಿಂದೆಲ್ಲ ವಾಯ್ಸ್ ಐತಲ್ಲ? ಆಡಿಯೊ ಎಲ್ಲ ಇದೆಯಲ್ಲ? ಬಿಯರ್ ಕುಡಿತಿಯಾ? ಅದು ಕುಡಿತಿಯಾ? ಎಲ್ಲ ಕೇಳ್ಯಾನಾ?

**ಯುವತಿ:** ಲೇ ಒಲ್ಲೆಪ್ಪಾ. ನಾ ವಾಯ್ಸ್ ಕೊಟ್ಟಿದ್ದು, ಬೇರೆ ಹುಡ್ಗಿ ಮಾತಾಡಿದ್ದು ವಿತ್ ವಿಡಿಯೊ ನಿಂಗೇನೋ ನಾ ಕಳಿಸ್ತೀನಿ ಇರು.

**ತಮ್ಮ:** ಕಳ್ಸ್ ನಮಗಾ

**ಯುವತಿ:** ಅವರು ಬರ್ಲಿ ತಡಿ. ನನ್ನ ಕಡೆ ಯಾವುದೂ ವಿಡಿಯೊ ಇಲ್ಲ. ಡಿ.ಕೆ. ಶಿವಕುಮಾರ್‌ದು ಯಾರೋ ಬರಾ ಹತ್ತಾರಾ. ಅವ್ರು ಎಲ್ಲ ಬಂದ ಮ್ಯಾಲೆ ಮಾತಾಡಿ ಕಳ್ಸ್ತೀನಿ.

**ತಮ್ಮ:** ಯಾಕ್ ಬೇಕ್ ಲೇ. ಶಿವಕುಮಾರ್, ಗಿವಕುಮಾರ್

**ಮತ್ತೊಬ್ಬ ಯುವಕ:** ಭಾಯಿ, ಭಾಯಿ, ಹಲೋ

6ನೇ ಪುಟ ನೋಡಿ

## ಎಫ್‌ಐಆರ್‌ನಲ್ಲಿ ಸೆಕ್ಷನ್ ಹೇಳುವುದೇನು?

ರಮೇಶ ಜಾರಕಿಹೊಳಿ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ನಲ್ಲಿ ಭಾರತೀಯ ದಂಡ ಸಂಹಿತೆ (ಐಪಿಸಿ) ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಹಲವು ಸೆಕ್ಷನ್‌ಗಳನ್ನು ಉಲ್ಲೇಖಿಸಿದ್ದು, ಆ ಸೆಕ್ಷನ್‌ಗಳು ಏನನ್ನು ಹೇಳುತ್ತವೆ ಎಂಬ ವಿವರ ಇಲ್ಲಿದೆ



ರಮೇಶ ಜಾರಕಿಹೊಳಿ

ಐಪಿಸಿ ಸೆಕ್ಷನ್ 354 (ಎ)– ಮಹಿಳೆಯ ಮೇಲೆ ಅತ್ಯಾಚಾರ ಮಾಡುವ ಉದ್ದೇಶದಿಂದ ಬಲ ಪ್ರಯೋಗ ನಡೆಸುವುದು, ಲೈಂಗಿಕ ಸುಖಕ್ಕಾಗಿ ಒತ್ತಾಯಿಸುವುದು, ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ನೀಲಿ ಚಿತ್ರಗಳನ್ನು ತೋರಿಸುವುದು ಮತ್ತು ಮಹಿಳೆಯ ಕುರಿತು ಲೈಂಗಿಕ ಭಾವನೆಗಳುಳ್ಳ ಹೇಳಿಕೆ ನೀಡುವುದು.

ಐಪಿಸಿ ಸೆಕ್ಷನ್ 506– ಕೊಲೆ ಬೆದರಿಕೆ.

ಐಪಿಸಿ ಸೆಕ್ಷನ್ 504– ಶಾಂತಿಭಂಗ ಮಾಡಲು ಉದ್ದೇಶಪೂರ್ವಕವಾಗಿ ಪ್ರಚೋದನಕಾರಿ ಮಾತನ್ನಾಡುವುದು.

ಐಪಿಸಿ ಸೆಕ್ಷನ್ 376 ಸಿ– ತನ್ನ ಅಧಿಕಾರದ ಪ್ರಭಾವ ಬಳಸಿ ಅತ್ಯಾಚಾರ ನಡೆಸುವುದು.

ಐಪಿಸಿ ಸೆಕ್ಷನ್ 417– ವಂಚನೆ ಅಪರಾಧಿಗೆ ಎರಡು ವರ್ಷಗಳವರೆಗೂ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುತ್ತದೆ

ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 67(ಎ)– ಲೈಂಗಿಕ ದೃಶ್ಯಗಳನ್ನು ವಿದ್ಯುನ್ಮಾನ ಮಾಧ್ಯಮದಲ್ಲಿ ಪ್ರಸಾರ ಮಾಡಿದವರಿಗೆ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ₹10 ಲಕ್ಷಗಳವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸುತ್ತದೆ.

**ಯುವತಿ ದೂರು:** ಸಿ.ಡಿ ಬಯಲಾದ 24 ದಿನಗಳ ನಂತರ ತಮ್ಮ ವಕೀಲ ಕೆ.ಎನ್. ಜಗದೀಶ್‌ಕುಮಾರ್ ಮೂಲಕ ಯುವತಿ, ನಗರ ಪೊಲೀಸ್ ಕಮಿಷನರ್ ಅವರಿಗೆ ಶುಕ್ರವಾರ ಮಧ್ಯಾಹ್ನ ದೂರು ನೀಡಿದ್ದಾರೆ.

ಆಡಿಯೊ–ವಿಡಿಯೊ ಏನಾದರೂ ಬಿಡುಗಡೆಯಾಗಲಿ. ಯಾವುದರಿಂದಲೂ ತನಿಖೆ ದುರ್ಬಲಗೊಳ್ಳುವುದಿಲ್ಲ. ಯುವತಿ ಕುಟುಂಬಕ್ಕೆ ರಕ್ಷಣೆ ಒದಗಿಸಲು ಸಿದ್ಧ

**ಬಸವರಾಜ ಬೊಮ್ಮಾಯಿ**, ಗೃಹ ಸಚಿವ

ಯುವತಿ ಹಾಗೂ ಅವರ ಕುಟುಂಬದ ಸದಸ್ಯರಿಗೆ ಭಯವಿದೆ. ಪ್ರಕರಣದ ವಿಚಾರಣೆಗಾಗಿ ಪೊಲೀಸರ ಎದುರು ಬೇಗನೇ ಬರುತ್ತಾರೆ. ಪೊಲೀಸರು ರಕ್ಷಣೆ ಭರವಸೆ ಕೊಡಬೇಕು

**ಕೆ.ಎನ್. ಜಗದೀಶ್‌ಕುಮಾರ್**, ವಕೀಲ

# ರಮೇಶ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ

ಅದನ್ನು ಆಧರಿಸಿ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಸದ್ಯದಲ್ಲೇ ಪ್ರಕರಣದ ತನಿಖೆ ಜವಾಬ್ದಾರಿ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಹಸ್ತಾಂತರವಾಗಲಿದೆ.

'ಕಿರುಚಿತ್ರ ಮಾಡುವುದಕ್ಕಾಗಿ ಸಚಿವರಾಗಿದ್ದ ರಮೇಶ ಜಾರಕಿಹೊಳಿ ಅವರನ್ನು ಸಂಪರ್ಕಿಸಿದ್ದೆ, ನನ್ನ ಮೊಬೈಲ್ ನಂಬರ್ ಪಡೆದಿದ್ದ ಅವರು, ಕರೆ ಮಾಡಿ ಸಲುಗೆಯಿಂದ ಮಾತನಾಡಲಾರಂಭಿಸಿದ್ದರು. ಸರ್ಕಾರಿ ಕೆಲಸ ಕೊಡಿಸುವುದಾಗಿ ಹೇಳಿದ್ದ ಅವರು ನನ್ನನ್ನು ಲೈಂಗಿಕವಾಗಿ ಬಳಸಿಕೊಂಡು ವಂಚಿಸಿದ್ದಾರೆ. ಅವರಿಂದ ಜೀವ ಬೆದರಿಕೆಯೂ ಇದೆ. ರಮೇಶ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಿ' ಎಂದು ಯುವತಿ ದೂರಿನಲ್ಲಿ ಒತ್ತಾಯಿಸಿದ್ದಾರೆ.

ದೂರು ಪರಿಶೀಲನೆ ನಡೆಸಿ ಪೊಲೀಸರು, ಲೈಂಗಿಕ ದೌರ್ಜನ್ಯ (ಐಪಿಸಿ 354 ಎ), ಜೀವ ಬೆದರಿಕೆ (ಐಪಿಸಿ 506), ಅವಾಚ್ಯ ಶಬ್ದಗಳಿಂದ ನಿಂದನೆ (ಐಪಿಸಿ 504), ಅಧಿಕಾರದಲ್ಲಿದ್ದುಕೊಂಡು ಅತ್ಯಾಚಾರ (376-ಸಿ), ನೌಕರಿ ಕೊಡಿಸುವುದಾಗಿ ವಂಚಿಸಿದ (ಐಪಿಸಿ 417) ಆರೋಪ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ರಮೇಶ ಜಾರಕಿಹೊಳಿ ಪ್ರಕರಣ ದಾಖಲಿಸಿದ್ದಾರೆ.

## 'ಶನಿವಾರ ದೊಡ್ಡ ಬಾಂಬ್ ಸ್ಫೋಟ'

ಬೆಂಗಳೂರು: 'ನಾಳೆ (ಶನಿವಾರ) ಸಂಜೆ 4 ರಿಂದ 6 ಗಂಟೆಯ ಒಳಗೆ ದೊಡ್ಡ ಬಾಂಬ್ ಸ್ಫೋಟವಾಗುತ್ತದೆ. ದೊಡ್ಡ ಮಟ್ಟದ ಬೆಳವಣಿಗೆ ಆಗಲಿದ್ದು, ನಾನೇ ಆಗ ಮಾತನಾಡುತ್ತೇನೆ' ಎಂದು ರಮೇಶ ಜಾರಕಿಹೊಳಿ ಹೇಳಿದ್ದಾರೆ.

'ಇದು ಬರಿ ಟ್ರಯಲ್, ನಾಳೆ ಸಂಜೆಯವರೆಗೆ ಕಾಯಿರಿ ಬಾಂಬ್ ಸ್ಫೋಟವಾಗುತ್ತದೆ. ಆಡಿಯೊದಲ್ಲಿ ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪ ಆಗಿದೆ. ತನಿಖೆ ನಡೆಯಲಿ. ಆಡಿಯೊದಲ್ಲಿ ಹೆಸರು ಬಂದ ಮಾತ್ರಕ್ಕೆ ಡಿ.ಕೆ ಆರೋಪಿಯಲ್ಲ. ಅವರು ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರೆಯಲಿ. ನನಗೆ ಅದ ರೀತಿ ಅನ್ಯಾಯ ಅವರಿಗೆ ಆಗ ಬಾರದು. ನನ್ನ ಹಾಗೆ ಅವರು ರಾಜೀನಾಮೆ ಕೊಡುವುದು ಬೇಡ' ಎಂದರು. 'ಶಿವಕುಮಾರ್ ಬಗ್ಗೆ ಆರೋಪ ಮಾಡುವುದಿಲ್ಲ. ಯಾವುದೇ ಪುರಾವೆ ಇಲ್ಲದೆ ಏನೂ ಹೇಳುವುದಿಲ್ಲ. ನಾನು ಯಾರಿಗೂ ಕೆಟ್ಟದ್ದನ್ನು ಬಯಸಿಲ್ಲ' ಎಂದರು.

'ಸರ್ಕಾರವನ್ನೇ ತೆಗೆದವನು ನಾನು. ಇದೆಲ್ಲ ಯಾವ ಲೆಕ್ಕ. ಸಮ್ಮಿಶ್ರ ಸರ್ಕಾರ ಉರುಳಿಸಿ, ಬಿಜೆಪಿ ಸರ್ಕಾರ ತಂದಿದ್ದಕ್ಕೆ ಷಡ್ಯಂತ್ರ ನಡೆಸಿದ್ದಾರೆ. ಇಂತಹ ದೂರುಗಳಿಗೆಲ್ಲ ಅಂಜುವುದಿಲ್ಲ. ನನ್ನ ವಿರುದ್ಧ ನಡೆದ ಷಡ್ಯಂತ್ರದ ಎಲ್ಲ ವಿವರವನ್ನೂ ಸಂಗತಿಯನ್ನು ಗೃಹ ಸಚಿವರ ಗಮನಕ್ಕೆ ತಂದಿದ್ದೇನೆ ಎಂದರು.

## ಆಡಿಯೊದಲ್ಲಿದೆ ಡಿಕೆಶಿ ಹೆಸರು

ಒಂದನೇ ಪುಟದಿಂದ

**ತಮ್ಮ:** ಮೂರು ಹೊತ್ತು ಊಟ ಮಾಡೋನಾ ದಿವಸಕ್ಕೆ ಸಾಕು.
**ಮತ್ತೊಬ್ಬ ಯುವಕ:** ಭಾಯಿ ಟೆನ್ಷನ್ ತಗೋಬೇಡ, ಆರಾಮ್ ಇರು. ನಾವೀಗ ಅಲ್ಲೇ ಬಂದಿದೀವಿ. ನಿಂಗ್ ಹೇಳುದ್ದಲ್ಲಾ ಯಾರೋ ಹೊಂಟರಾ ಅಂತಾ. ಅವರೇ ಯಾರ, ಒಂದು ಅರ್ಧ ಗಂಟೆ ಅವ್ರು ಬರ್ತಾರ. ನಿಂಗ್ ಫೋನ್ ಮಾಡ್ತೀನಿ ನಾನು. ಆಯ್ತು.

---

**ತಮ್ಮ:** ಬ್ರೋ ಪ್ಲೀಸ್ ಬ್ರೋ, ಇಲ್ಲಿ ಮನ್ಯಾಗ ಎಲ್ಲ ಟೆನ್ಷನ್ ಐತಿ
**ಮತ್ತೊಬ್ಬ ಯುವಕ:** ಟೆನ್ಷನ್ ಮಾಡ್ಕೋಬೇಡ
**ತಮ್ಮ:** ಲೇ ಅದು ನಾಳೆ ಸ್ಟೇಟ್‌ಮೆಂಟ್ ಕೊಡು ಅಂತಾರಾ
**ಯುವತಿ:** ಲೇ ಅದೆಲ್ಲ ನಾನ್ ಹೋಗಲ್ಲಾ ಅಲ್ಲೀತನ.
**ಮತ್ತೊಬ್ಬ ಯುವಕ:** ಅಲ್ಲೀತನ ಹೋಗಲ್ಲ ಭಾಯಿ, ನೀನ್ ಟೆನ್ಷನ್ ಮಾಡ್ಕೋಬೇಡ.
**ತಮ್ಮ:** ಇಲ್ಲಾ ಬ್ರೋ, ನಾಳೆ ಕೊಡ್ಬೇಕಾಗುತ್ತೆ. ನಾಳೆ ಅಂವ ರಾಜೀನಾಮೆ ಕೊಡ್ಬೇಕ್ ಅಲ್ಲಿ.
**ಯುವತಿ:** ನಾನಂತೂ ಅದೆಲ್ಲ ಇಲ್ಲಾ
**ತಮ್ಮ:** ಮತ್ ನೀ ಮೀಡಿಯಾದಾಗೆ ಎಲ್ಲ ಫೋನ್ ಹಚ್ಚಿ ಮಾತಾಡಿದ್ಯಲ್ಲ?
**ಮತ್ತೊಬ್ಬ ಯುವಕ:** ಮೀಡಿಯಾದಾಗ್ ಫೋನ್ ಮಾಡಿದ್ ಅಲ್ಲ ಭಾಯಿ.
**ಯುವತಿ:** ಮೀಡಿಯಾಕ್ಕೆ ಫೋನ್ ಮಾಡಿದ್ದ್ ಅಲ್ಲ ಅದು. ಅವನ ಸರಿ ಯಾರೋ ಮಾತಾಡಿರೋದು, ವಾಯ್ಸ್ ನಂದು ಕೊಟ್ಟಿರೋದು. ಮಾಡ್ಯುಲೇಷನ್ ಮಾಡೋಕ್ ಬರ್ತೈತಿ ವಾಯ್ಸ್. ಮಾಡ್ಯುಲೇಷನ್ ವಾಯ್ಸ್ ಅದು ಅಷ್ಟೇ. ನಾನು ಎಲ್ಲೂ ಬರೋಲ್ಲ. ದಟ್ ಈಸ್ ನಾಟ್ ಮಿ. ನನ್ನಿ ಯಾರ್ ಅಂತಾನೂ ಗೊತ್ತಿಲ್ಲ.
**ತಮ್ಮ:** ಹೊರಗ್ ಎಲ್ಲೂ ಅಡ್ಯಾಡ್‌ಬಡಾ ಲೇ.
**ಯುವತಿ:** ಇಲ್ಲ ಇಲ್ಲ ಎಲ್ಲೂ ಇಲ್ಲ. ಜಸ್ಟ್ ಏನೂ ಇಲ್ಲೇ ಬಂದೀವಿ, ಅವ್ರ್ ಬರ್ತಾರಾ, ಅವ್ರ್ ಜತೆ
**ತಮ್ಮ:** ಲೇ... ಮ್ಯಾಟ್ರು ಭಾಳಾ ಕೆಟ್ಟ್ ಸೀರಿಯಸ್ ಐತಿ. ನಾಳೆ ಅವ್ನ್ ಶಾಸಕ. ಅವ್ನು ನಾಳೆ ರಾಜೀನಾಮೆ ಕೊಡ್ಬೇಕಂತೆ.
**ಯುವತಿ:** ನಾನೂ ಆಕಾಶ್ ಇಬ್ರೂ ಹೊಂಟೀವಿ. ನನ್ ಜೊತೆ ಆಕಾಶ್ ಇರ್ತಾನಾ, ಅಪ್ಪರೆ ನಂಬ್ರಿ.
**ಯುವತಿ:** ಮಮ್ಮಿ ನೀ ಆರೆ ನನ್ ನಂಬೇ ಮಮ್ಮಿ
**ತಾಯಿ:** ನಂಬೀನಾ. ನಾ ಇಷ್ಟು ದಿನ ನಂಬೀನೆ
**ಯುವತಿ:** ಆಕಾಶ್, ನನ್ ಫ್ರೆಂಡ್ಸ್ ಎಲ್ಲ ಸಪೋರ್ಟ್ ಮಾಡಾ ಹತ್ಯಾರಾ. ನೀವೇ ಮಾಡ್ತಿಲ್ಲ. ನಂಗ್ ಅಂಜ್ಕಿ ಬರಾ ಹತ್ಯಾದಾ.
**ತಾಯಿ:** ನಾನ್ ನಂಬೀನ ಬೆಂಗ್ಳೂರ್ನಾಗಾ ಬಿಟ್ಟೀನಿ. ನೀನ್ ಊರಿಗ್ ಬಂದ್ ಬಿಡು. ರಾಜಕೀಯದವ್ರ್ ಜತೆ ಹೋಗ್‌ಬ್ಯಾಡಾ ಅಂತ ನಾನ್ ಹೇಳಿರ್ಲಿಲ್ಲಾ?
**ಯುವತಿ:** ನೀನ್ ತಲೆ ಕೆಡಿಸ್ಕೋಬೇಡ.
**ತಾಯಿ:** ನಿನ್ ಡ್ಯಾಡಿಗ್ ಹೇಳಿದ್ರೆ ಸತ್ತ್ ಹೋಕ್ಯಾನಾ.
**ಯುವತಿ:** ಡ್ಯಾಡಿಗ್ ಏನ್ ಹೇಳಿರಿ?
**ತಾಯಿ:** ಏನೂ ಗೊತ್ತಿಲ್ಲ, ನಾಳೆಗೆ ನ್ಯೂಸ್ ಏನಾರು ನೋಡಿದ್ರಾ ಗ್ಯಾರಂಟಿ ಸೂಸೈಡ್ ಕತೆಯಾ. ದಯವಿಟ್ಟು ನೀನ್ ಅದನ್ ಬಿಟ್ಟೀ ಊರಿಗ್ ಬಂದ್ ಬಿಡು.
**ತಮ್ಮ:** ಅಂವ ಬಂದು ಎಲ್ಲ ಫುಲ್ ವಿಡಿಯೊ ತೋರಿಸಿದಾ. ನಿಂದೆಲ್ಲ ಫೇಸ್ ಕ್ಲಿಯರ್, ನೀ ಮಾತಾಡೋದು ಎಲ್ಲ ಐತಿ ಅಲ್ಲಿ.
**ಯುವತಿ:** ಲೇ ಅದು ನಾ ಅಲ್ಲಪ್ಪಾ, ಅದೆಲ್ಲ ಗ್ರಾಫಿಕ್ಸ್.
**ತಮ್ಮ:** ಏನ್ ಗ್ರಾಫಿಕ್ಸ್? ಯಾರಾರು ನಂಬ್ತಾರಾ?
**ಯುವತಿ:** ಆಯ್ತು ನಾ ಎಲ್ಲ ಕ್ಲಿಯರ್ ಮಾಡಿಸ್ತೀನಿ ಅವಾಗಾರ ನಂಬ್ತೀಯಾ?
**ತಮ್ಮ:** ನೀ ಈಗ್ ಯಾರ ಜೋಡಿ ಮಾತಾಡ್ತೀಯ?
**ಯುವತಿ:** ನಾನು ಡಿ.ಕೆ. ಶಿವಕುಮಾರ್ ಮನೆ ಬಳಿ ಬಂದೀನಿ.
**ತಮ್ಮ:** ಲೊಕೇಷನ್ ಎಲ್ಲ ಕಳ್ಸು ನಾಲ್ಕ್ ಜನ್ರಿಗೆ. ಇದು ಭಾಳಾ ಡೇಂಜರ್. ನಾಳೆ ಅವ್ರ್ ಸರ್ಕಾರ ಬೀಳಿಸ್ತಾರಾ, ಅವ್ರ್ ಅಷ್ಟೇನ್ ಈಸಿಯಾಗಿ ಬಿಡೊಲ್ಲ.
**ಯುವತಿ:** ಆಯ್ತು
**ತಮ್ಮ:** ಏನೇ ಡಿಸಿಷನ್ ತಗೊಳ್ಳೊದಾದ್ರೂ ಭಾಳಾ ಯೋಚ್ನೆ ಮಾಡು. ಅವನ ವಿರುದ್ಧ ಕೊಟ್ಟರೆ ಸ್ಟೇಟ್ಮೆಂಟ್‌ಗೆ ಕರೆದರೆ ನೂರು ಸರಿ ಯೋಚ್ನೆ ಮಾಡು. ಅವನ ವಿರುದ್ಧ ಕೊಟ್ಟರೆ ಏನಾಗುತ್ತೆ? ಅವನ ಪರವಾಗಿ ಕೊಟ್ಟರೆ ಏನಾಗುತ್ತೆ? ಭಾಳಾ ಯೋಚನೆ ಮಾಡಿ ಕೊಡು.

## ರಮೇಶ ಬಂಧನಕ್ಕೆ ಕಾಂಗ್ರೆಸ್ ಆಗ್ರಹ

ಬೆಂಗಳೂರು: ಅತ್ಯಾಚಾರ ಆರೋಪದಡಿ ಪ್ರಕರಣ ದಾಖಲಾಗಿರುವುದರಿಂದ ಶಾಸಕ ರಮೇಶ ಜಾರಕಿಹೊಳಿ ಅವರನ್ನು ತಕ್ಷಣ ಬಂಧಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಈ ಕುರಿತು ಟ್ವಿಟರ್‌ನಲ್ಲಿ ಆಗ್ರಹಿಸಿರುವ ಪಕ್ಷ, 'ಎಫ್‌ಐಆರ್ ದಾಖಲಾದರೂ ಅತ್ಯಾಚಾರ ಆರೋಪಿಯನ್ನು ರಕ್ಷಿಸಲಾಗುತ್ತಿದೆ. ಪ್ರಭಾವಿ ವ್ಯಕ್ತಿಯನ್ನು ರಕ್ಷಿಸಲಾಗುತ್ತಿದೆ ಎಂಬ ಕಳಂಕ ಕರ್ನಾಟಕಕ್ಕೆ ಬೇಡ. ಅದೇನಿದ್ದರೂ ಉತ್ತರ ಪ್ರದೇಶದ ಯೋಗಿಯ ಆಡಳಿತಕ್ಕಿರಲಿ' ಎಂದು ಹೇಳಿದೆ.